1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 22

CW- 37

ಪ್ರ. ಬೋ. ದಿನಾಂಕಃ 25-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಡಾ. ಛಾಯಾಕುಮಾರಿ |
| ತಂದೆ/ಗಂಡನ ಹೆಸರು | : | ತಂದೆ ಎಂ ಕೃಷ್ಣಾ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಉಪ ನಿರ್ದೇಶಕರು, ಆರ್ ಎಫ್ ಎಸ್ ಎಲ್ , ದೊಡ್ಡಬಾತಿ |
| ವಾಸ | : | ದೊಡ್ಡಬಾತಿ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು 2016 ರಿಂದ ಇಲ್ಲಿಯವರೆಗೆ ಆರ್ ಎಫ್ ಎಸ್ ಎಲ್ ದೊಡ್ಡಬಾತಿಯಲ್ಲಿ ಉಪನಿರ್ದೇಶಕರು ಅಂತಾ ಕೆಲಸ ನಿರ್ವಹಿಸುತ್ತಿದ್ದೇನೆ.

ದಿ.01-06-2023 ರಂದು ಹರಿಹರ ನಗರ ಪೊಲೀಸ್ ಠಾಣಾ ಅಧಿಕಾರಿಗಳು ಕ್ರೈ ನಂ.81/23 ರ ಪ್ರಕರಣದಲ್ಲಿ ಹತ್ತು ಶೀಲ್ ಆದ ವಸ್ತುಗಳನ್ನು, ಡಿವೈ.ಎಸ್.ಪಿ, ದಾವಣಗೆರೆ ಗ್ರಾಮಾಂತರ ಉಪ ವಿಭಾಗದವರು ಸಿಪಿಸಿ-40 ರವರ ಮುಖಾಂತರ ವಸ್ತುಗಳನ್ನು ಪರೀಕ್ಷೆಗಾಗಿ ನಮ್ಮ ಪ್ರಯೋಗಾಲಕ್ಕೆ ಕಳುಹಿಸಿಕೊಟ್ಟಿದ್ದರು. ಸದರಿ ವಸ್ತುಗಳನ್ನು ಪ್ರಯೋಗಾಲಯದ ಸ್ವಾಗದ ವಿಭಾಗದವರು ಸ್ವೀಕರಿಸಿ ನೋಂದಣಿ ಮಾಡಿಕೊಂಡು , ಜೀವಶಾಸ್ತ್ರ ವಿಭಾಗಕ್ಕೆ ಕಳುಹಿಸಿಕೊಟ್ಟರು. ಜೀವಶಾಸ್ತ್ರ ವಿಭಾಗದಲ್ಲಿ ಮಮತಾ ಯಾದವ್ ಇವರು ಸದರಿ ವಸ್ತುಗಳನ್ನು ಸ್ವೀಕರಿಸಿ ಪರೀಕ್ಷೆ ಮಾಡಿ, ನನಗೆ ವರದಿ ಕಳುಹಿಸಿಕೊಟ್ಟಿರುತ್ತಾರೆ. ಸದರಿ ವರದಿಗೆ ನಾನು ಡಿಜಿಟಲ್ ಸಹಿ ಮಾಡಿ ಸಂಬಂಧಪಟ್ಟ ಪೊಲೀಸರಿಗೆ ಆನ್ ಲೈನ್ ಮೂಖಾಂತರ ಕಳುಹಿಸಿಕೊಟ್ಟಿರುತ್ತೇನೆ.

ಫಾರ್ವರ್ಡಿಂಗ್ ಪತ್ರ ನೋಡುತ್ತಿದ್ದು, ಅದನ್ನು ನಿಪಿ.62 ಎಂದು ಗುರುತಿಸಲಾಯಿತು. ವರದಿ ನೋಡುತ್ತಿದ್ದು, ಅದನ್ನು ನಿಪಿ.63 ಎಂದು ಗುರುತಿಸಲಾಯಿತು.

ಪಾಟೀ ಸವಾಲು:– ಆರೋಪಿತರಪರ ಶ್ರೀ ಪಿ ಬಿ ವಕೀಲರಿಂದ.

ಪೊಲೀಸರ ಕಳುಹಿಸಿದ ವಸ್ತುಗಳನ್ನು ನಾನು ಖುದ್ದಾಗಿ ಸ್ವೀಕರಿಸಿರುವುದಿಲ್ಲ ಹಾಗೂ ಅವುಗಳನ್ನು ನಾನು ಪರೀಕ್ಷೆ ಮಾಡಿರುವುದಿಲ್ಲ. ಪೊಲೀಸರ ಮಾತು ಕೇಳಿ ವರದಿಯನ್ನು ಸಮರ್ಪಕವಾಗಿ ಪರಿಶೀಲಿಸದೇ ಪೊಲೀಸರಿಗೆ ಕಳುಹಿಸಿರುತ್ತೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆ:– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 21

CW- 36

ಪ್ರ. ಬೋ. ದಿನಾಂಕಃ 25-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಡಾ. ಪ್ರಭುಗೌಡ ಪಾಟೀಲ್ |
| ತಂದೆ/ಗಂಡನ ಹೆಸರು | : | ಬಸನಗೌಡ ಪಾಟೀಲ್ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು , ಸಿಜಿ ಆಸ್ಪತ್ರೆ , ದಾವಣಗೆರೆ |
| ವಾಸ | : | ದಾವಣಗೆರೆ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ದಾವಣಗೆರೆಯ ಸಿಜಿ ಆಸ್ಪತ್ರೆಯಲ್ಲಿ ದಿ.01-09-2019 ರಿಂದ ಈಗಲೂ ಸಹ ವೈದ್ಯಾಧಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ಹರಿಹರ ನಗರ ವೃತ್ತ ನಿರೀಕ್ಷಕರು, ಗಾಯಾಳು ಫಕ್ಕಿರಪ್ಪ ಇವರ ಗಾಯದ ಪ್ರಮಾಣಪತ್ರ ನೀಡಬೇಕೆಂದು ನಮ್ಮ ಆಸ್ಪತ್ರೆಗೆ ದಿ.17-05-2023 ರಂದು ಪತ್ರ ಬರೆದಿದ್ದರು. ಪೊಲೀಸರು ಕಳುಹಿಸಿದ ಪತ್ರ ನೋಡುತ್ತಿದ್ದು , ಅದನ್ನು ನಿಪಿ.56 ಎಂದು ಗುರುತಿಸಲಾಯಿತು.

ಸದರಿ ಪತ್ರ ನೋಡಿದ ನಂತರ ಸದರಿ ಗಾಯಾಳು ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಹೆಚ್ಚಿನ ಚಿಕಿತ್ಸೆಗೆ ನಮ್ಮ ಆಸ್ಪತ್ರೆಗೆ ಕಳುಹಿಸಿದ್ದು , ಅದರಿ ಹಿಂಬರಹ ನಾನು ನೀಡಿರುತ್ತೇನೆ. ಫಕ್ಕಿರಪ್ಪ ಇವರ ಗಾಯದ ಪ್ರಮಾಣಪತ್ರವನ್ನು ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಅಂದು ಕರ್ತವ್ಯದಲ್ಲಿದ್ದ ವೈದ್ಯರಿಂದ ಪಡೆಯಬೇಕೆಂದು ನಾನು ಪೊಲೀಸರಿಗೆ ಪತ್ರ ಕಳುಹಿಸಿದ್ದು , ಸದರಿ ಪತ್ರ ನೋಡುತ್ತಿದ್ದು , ಅದನ್ನು ನಿಪಿ.57 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ.57(ಎ) ಎಂದು ಗುರುತಿಸಲಾಯಿತು.

ನಮ್ಮ ಆಸ್ಪತ್ರೆಯಿಂದ- ಹರಿಹರ ಆಸ್ಪತ್ರೆಯಿಂದ ಗಾಯಾಳು ಹೆಚ್ಚಿನ ಚಿಕಿತ್ಸೆಗೆ ಬಂದಿದ್ದು , ಆ ಬಗ್ಗೆ ನಾನು ಹರಿಹರ ಪೊಲೀಸರಿಗೆ ನೀಡಿದ ಮಾಹಿತಿ ಪತ್ರ ನೋಡುತ್ತಿದ್ದು, ಅದನ್ನು ನಿಪಿ.58 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ.58(ಎ) ಎಂದು ಗುರುತಿಸಲಾಯಿತು. ಸದರಿ ಗಾಯಳು ಫಕ್ಕಿರಪ್ಪ ಇವರಿಗೆ ಚಿಕಿತ್ಸೆ ನೀಡಿಲು ಶಸ್ತ್ರ ಚಿಕಿತ್ಸಾ ತಜ್ಞರು ಹಾಗೂ ಕಿವಿ , ಮೂಗು , ಗಂಟಲು ತಜ್ಞರ ಬಳಿ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಗಯಾಳು ಬಂದಾಗ ಸದರಿ ಗಯಾಳುವಿನ ಹೇಳಿಕೆ ಪ್ರಕಾರ ದಿ.14-05-2023 ರ ರಾತ್ರಿ 10-50 ಗಂಟೆ ಸಮಯದಲ್ಲಿ ಎರಡು ಜನರ ಮಧ್ಯ ಹಲ್ಲೆಗೆ ಒಳಗಾಗಿ ಸದರಿ ಹಲ್ಲೆ ನಡೆದ ಸ್ಥಳ ಪ್ರಶಾಂತ್ ನಗರ ಮತ್ತು ಹರಿಹರದ ಸ್ರಾಕರಿ ಆಸ್ಪತ್ರೆ ಅಂತಾ ತಿಳಿಸಿರುತ್ತಾರೆ. ನಾನು ನೋಡಿದ ಸದರಿ ಗಾಯಾಳುವಿಗೆ ಈ ಕೆಳಕಂಡ ಗಾಯಗಳು ಕಂಡು ಬಂದವು.

1. ತುಟಿಯ ಮೇಲ್ಬಾಗದಲ್ಲಿ 3 x 1 ಸೆ ಮಿ ಹರಿದ ಗಾಯ .
2. ಎಡತುಟಿಯ ಮೇಲ್ಬಾಗದಲ್ಲಿ 5 x 2 x 0.5 ಸೆ ಮಿ ಅಳತೆಯುಳ್ಳ ಹರಿದ ಗಾಯ ,
3. ಎಡ ಮೊಣಕೈ ಮೇಲೆ 3 x 01 x 01 ಸೆಮಿ ಅಳತೆಯ ಹರಿದ ಗಾಯ.
4. ಎಡ ಎದೆಯ ಮೇಲೆ ಊತದ ಗಾಯ , ಮುಟ್ಟಿದಾಗ ನೋವು ಇತ್ತು.
5. ಕೆಳಗದ್ದದ ಮೇಲೆ 1 x 1 x 0.5 ಸೆಮಿ ಅಳತೆಯ ಹರಿದ ಗಾಯವಿತ್ತು.
6. ಎಡ ಕಿವಿ ಮೇಲ್ಬಾಗದಲ್ಲಿ 2 x 0.5 x 0.5 ಸೆಮಿ ಅಳತೆಯ ಹರಿದ ಗಾಯವಿತ್ತು.

ಇದಕ್ಕೆ ಸಂಬಂಧಪಟ್ಟಂತೆ ನಾನು ನೀಡಿದ ಫಿಡ್ ಬ್ಯಾಕ್ ಮತ್ತು ಚಿಕಿತ್ಸಾ ವರದಿ ನೀಡಿದ್ದು, ಅವುಗಳನ್ನು ನೋಡುತ್ತಿದ್ದು, ನಿಪಿ.59 ಮತ್ತು 60 ಎಂದು ಗುರುತಿಸಲಾಯಿತು. ಅವುಗಳಲ್ಲಿನ ನನ್ನ ಸಹಿಗಳನ್ನು ನಿಪಿ.59(ಎ) ಮತ್ತು 60(ಎ) ಎಂದು ಗುರುತಿಸಲಾಯಿತು. ಸದರಿ ಗಾಯಾಳುವಿನ ಎದೆಯ ಮತ್ತು ಹೊಟ್ಟೆಯ ಎಕ್ಸ ರೇ ತೆಗೆಯಲಾಯಿತು. ಮತ್ತು ಹೊಟ್ಟೆಯ ಭಾಗ ಸ್ಕ್ಯಾನ್ ಮಾಡಲಾಯಿತು. ಸದರಿ ವರದಿ ನೋಡಿದಾಗ ಎರಡೂ ನಾರ್ಮಲ್ ಇದ್ದವು. ನಾವು ನೀಡಿದ ಫಿಡ್ ಬ್ಯಾಕ್ ನೋಡತ್ತಿದ್ದು , ಅದನ್ನು ನಿಪಿ.61 ಎಂದು ನನ್ನ ಸಹಿಯನ್ನು ನಿಪಿ.61(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:-</u> ಆರೋಪಿತರಪರ ಶ್ರೀ ಪಿ ಬಿ ವಕೀಲರಿಂದ.

ಹರಿಹರ ಸರ್ಕಾರಿ ಆಸ್ಪತ್ರೆಯಿಂದ ಗಾಯಾಳುವನ್ನು ನಮ್ಮ ಆಸ್ಪತ್ರೆಗೆ ರೆಫರ್ ಮಾಡಿದ್ದ ಬಗ್ಗೆ ಯಾವುದೇ ದಾಖಲೆ ಬಂದಿರುವುದಿಲ್ಲ. ಸರ್ಕಾರಿ ಅಂಬುಲನ್ಸ ಮತ್ತು ಅದರ ಚಾಲಕ

ನಾಗರಾಜ್ ಇವರ ಆಧಾರದ ಮೇಲೆ ಸದರಿ ಗಾಯಾಳು ಹರಿಹರ ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚುವರಿ ಚಿಕಿತ್ಸೆಗೆ ಕಳುಹಿಸಿದ್ದಾರೆ ಎಂದು ನಾನು ಹೇಳಬಲ್ಲೆ. ನಿಪಿ.58 ರಲ್ಲಿ ಅಂಬುಲನ್ಸ ಚಾಲಕನ ಹೆಸರಾಗಲಿ ಅಂಬುಲನ್ಸ ಬಗ್ಗೆಯಾಗಲಿ ನಮೂದು ಮಾಡಿಲ್ಲ. ನಿಪಿ.58 ರಲ್ಲಿ ಹರಿಹರದ ಪ್ರಶಾಂತ್ ನಗರ ಅಂತಾ ನಮೂದು ಆಗಿದೆ ಆದರೆ ಹರಿಹರ ಸರ್ಕಾರಿ ಆಸ್ಪತ್ರೆ ಅಂತಾ ನಮೂದು ಇಲ್ಲ. ಗಾಯಾಳುಗಳ ಮಾಹಿತಿ ಆಧಾರದ ಮೇಲೆ ನಿಪಿ.58 ಮಾಹಿತಿ ನೀಡಿರುತ್ತೇನೆ. ನಿಪಿ.58 ದಾಖಲೆಯನ್ನು ಹರಿಹರ ಆಸ್ಪತ್ರೆಗೆ ಯಾರು ಕಳುಹಿಸಿರುತ್ತಾರೆ ಎಂದು ಗೊತ್ತಿಲ್ಲ. ನಮ್ಮಲ್ಲಿರುವ ಓಪಿಡಿಗೆ ನಾವು ಕೊಟ್ಟಿರುತ್ತೇವೆ. ನಿಪಿ.58 ರಲ್ಲಿ ಸದರಿ ಪತ್ರವನ್ನು ಸ್ವೀಕರಿಸಿದ್ದರ ಬಗ್ಗೆ ಓಪಿಡಿ ಪೊಲೀಸರು ಹಿಂಬರಹ ಮಾಡಿರುತ್ತಾರೆ.

ನಿಪಿ.60 ದಾಖಲೆಯಲ್ಲಿ ಪ್ರಶಾಂತ್ ನಗರ ಹರಿಹರ ಅಂತಾ ನಮೂದಿಸಲಾಗಿದೆ ವಿನಹ ಸರ್ಕಾರಿ ಆಸ್ಪತ್ರೆ ಹರಿಹರ ಎಂದು ನಮೂದು ಇಲ್ಲ ಎನ್ನುವುದು ನಿಜ. ಸದರಿ ನಿಪಿ.60ರ ನಂತರದ ಪುಟದಲ್ಲು ಸಹ ಪ್ರಶಾಂತ್ ನಗರ ಹರಿಹರ ಅಂತಾ ನಮೂದಿಸಿಸಲಾಗಿದೆ , ಸರ್ಕಾರಿ ಆಸ್ಪತ್ರೆ ಹರಿಹರ ಅಂತಾ ಮೂದಿಸಲಾಗಿಲ್ಲ. ನಿಪಿ.59 ರಲ್ಲಿ ಪ್ರಶಾಂತ್ ನಗರ ಹರಿಹರ ಅಂತಾ ಬರೆದು, ನಂತರ ಸರ್ಕಾರಿ ಆಸ್ಪತ್ರೆ ಹರಿಹರ ಅಂತಾ ಸೇರಿಸಲಾಗಿದೆ ಎನ್ನುವುದು ಸುಳ್ಳು. ನಿಪಿ.60ರ 2ನೇ ಪುಟದಲ್ಲಿ "and in GH Hospital, Davangere," ಅಂತಾ ಬರೆಯಲು ಪ್ರಯತ್ನಪಟ್ಟಿದ್ದು , ಆದರೆ ಅಲ್ಲಿ ಜಾಗ ಇಲ್ಲದ್ದರಿಂದ ಬಿಟ್ಟಿರುತ್ತೇವೆ ಎನ್ನುವುದು ಸುಳ್ಳು. "and in GH Hospital, Davangere" ನ್ನು ಪೊಲೀಸರ ಕೋರಿಕೆ ಮೇರೆಗೆ ಸೇರಿಸಲಾಗಿದೆ ಎನ್ನುವುದು ಸುಳ್ಳು. ನಿಪಿ.59 ರಲ್ಲಿ ರೆಫರ್ಡ ಫ್ರಾಮ್ ಹರಿಹರ ಜಿ ಹೆಚ್ ಎಂದು ನಮೂದಿಸಲಾಗಿದೆ. ಹರಿಹರ ಎಂ ಎಲ್ ಸಿ ರಿಜಿಸ್ಟರ್ ನನ್ನ ಕಡತದಲ್ಲಿ ಇರುವುದಿಲ್ಲ. ಹರಿಹರ ಆಸ್ಪತ್ರೆಯಿಂದ ಯಾವುದೇ ದಾಖಲೆಗಳು ಬಂದಿಲ್ಲ.

ನಿಪಿ.61 ಫಿಡ್ ಬ್ಯಾಕ್ ನಲ್ಲಿ ಪ್ರಶಾಂತ್ ನಗರ, ಹರಿಹರ ಎಂದು ನಮೂದಿಸಲಾಗಿದೆ. ಆದರೆ ಜಿ ಹೆಚ್ ಹರಿಹರ ಅಂತಾ ನಮೂದು ಆಗಿಲ್ಲ. ನಿಪಿ.61 ರಲ್ಲಿ your letter No. ಎಂದು ಬರೆದಿದ್ದು, ಅಲ್ಲಿ G.H, ಹರಿಹರ ಅಂತಾ ಬರೆಯಲಾಗಿದೆ ವಿನಃ ನಂಬರ್ ಬರೆಯಲಾಗಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಬಂದಂತಹ ಓಪಿಡಿ ರಸೀದಿ ಆಧಾರದೆ ಮೇಲೆ ಮತ್ತು ಪೊಲೀಸರು ಕೊಟ್ಟ ಮನವಿಯ ಮೇಲೆ ಹಾಗೂ ನಮ್ಮ ಆಸ್ಪತ್ರೆಯ ದಾಖಲೆಗಳನ್ನು ನೋಡಿ ನಿಪಿ.61 ದಾಖಲೆ ಕೊಟ್ಟಿರುತ್ತೇನೆ.

ಗಾಯಾಳು ಫಕ್ಕಿರಪ್ಪ ಇವರು ನಮ್ಮ ಆಸ್ಪತ್ರೆಗೆ ದಿ.14-05-2023 ರ ರಾತ್ರಿ 11-14 ಕ್ಕೆ ಬಂದಿರುತ್ತಾರೆ. ಅದೇ ದಿನ ಆತನಿಗೆ ಹೊರ ರೋಗಿಯಾಗಿ ಚಿಕಿತ್ಸೆ ನೀಡಿ ವಾಪಸ್ ಕಳುಹಿಸಿರುತ್ತೇವೆ. ವಾಪಸ್ ಕಳುಹಿಸಿದ ಸಮಯ ನಮೂದು ಇಲ್ಲ. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಹೊರ ರೋಗಿಗಳಿಗೆ ಕ್ಯಾಸುವಲ್ಟಿ ಚಿಕಿತ್ಸೆ ನೀಡುತ್ತಾರೆ. ಒಳರೋಗಿಯಾಬೇಕಾದಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ಕಳುಹಿಸಿಕೊಡುತ್ತೇವೆ. ಒಳರೋಗಿಯಾಗಿ ಚಿಕಿತ್ಸೆ ಪಡೆದ ರೋಗಿಗೆ ಸಂಬಂಧಪಟ್ಟಂತೆ ಅಡ್ಮಿಶನ್ ಮಾಡಿಕೊಂಡು, ಪ್ರತ್ಯಕ ರೂಮಿಗೆ ಚಿಕಿತ್ಸೆಗೆ ಕಳುಹಿಸಿಕೊಡುತ್ತೇವೆ. ನಮ್ಮ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಿಭಾಗ ಮತ್ತು ಕ್ಯಾಸುವಲ್ಟಿ ಎರಡೂ ಅಕ್ಕಪಕ್ಕ ಇರುತ್ತವೆ. ಎರಡು ಪ್ರತ್ಯೇಕವಾದ ಕಟ್ಟದಲ್ಲಿರುತ್ತವೆ. ನಿಪಿ.61 ರಲ್ಲಿ ದಿ.14-05-2023 ರಂದು ಗಾಯಾಳು ಆಸ್ಪತ್ರೆಗೆ ಬಂದಿದ್ದು , ಅದೇ ದಿನ ಚಿಕಿತ್ಸೆ ಪಡೆದು ಹೋಗಿರುತ್ತಾರೆ, ಆದರೆ ಗಾಯಾಳು ರಾತ್ರಿ 11-59 ರ ಒಳಗೆ ಹೋಗಿರುತ್ತಾರೆ ಎಂದು ಪ್ರಶ್ನಿಸಿದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸಿರುತ್ತಾರೆ.

ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಗಾಯಾಳು ಫಕ್ಕಿರಪ್ಪ ಈತನು ಯಾರ ಜೊತೆ ಬಂದಿರುತ್ತಾನೆ ಎಂದು ನಮೂದು ಮಾಡಿಲ್ಲ. ನಾನು ಸದರಿ ಗಾಯಾಳುವಿಗೆ ಚಿಕಿತ್ಸೆ ನೀಡಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ಮಾತು ಕೇಳಿ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎನ್ನುವುದು ಸುಳ್ಳು. ಗಾಯಾಳು - 14-05-2023 ರಂದು ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಘಟನೆಯಾಗಿ ಗಾಯವಾಗಿತ್ತು ಎಂದು ನನ್ನ ಮುಂದೆ ಹೇಳಿಲ್ಲದಿದ್ದರೂ ಸಹ ಹೇಳಿದ್ದಾರೆ ಅದನ್ನು ನಾನು ಬರೆದಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಿಪಿ.59 ರಲ್ಲಿ ನಮೂದಿಸಿದ ಗಾಯಗಳಿಗೆ ನಾನು ಚಿಕಿತ್ಸೆನೀಡಿದ್ದ ಬಗ್ಗೆ ದಾಖಲೆಗಳಲ್ಲಿ ನಮೂದು ಮಾಡಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಆದೇಶದ ಪ್ರಕಾರ ನಮ್ಮ ಆಸ್ಪತ್ರೆಯ ಸಿಬ್ಬಂದಿಗಳು ಗಾಯಾಳುವಿಗೆ ಚಿಕಿತ್ಸೆ ನೀಡಿರುತ್ತಾರೆ. ಗಾಯಾಳುವಿಗೆ ಆದ ನಿಪಿ.59 ರಲ್ಲಿ ನಮೂದಿಸಿದ ಗಾಯಗಳಿಗೆ ನಾನು ಸ್ವತಹ ಚಿಕಿತ್ಸೆ ನೀಡಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಆಸ್ಪತ್ರೆಯಲ್ಲಿ ಕ್ಯಾಸುವಲ್ಟಿಗೆ ಬೇರೆ ರೂಮ್ ಇರುತ್ತದೆ, ಎಕ್ಸರೇ ಗೆ ಬೇರೆ ರೂಮ್ ಇರುತ್ತದೆ , ಇ ಎನ್ ಟಿ ಗೆ ಬೇರೆ ರೂಮ್ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ - ಕ್ಯಾಸುವಲ್ಟಿಗೆ ಎಲ್ಲ ವೈದ್ಯರು ಬರುತ್ತಾರೆ ಮತ್ತು ರೋಗಿಯನ್ನು ಪರೀಕ್ಷೆ ಮಾಡುತ್ತಾರೆ ,

ಇನ್ನುಳಿದ ಎಕ್ಸರೇ , ಅಲ್ಟ್ರಾ ಸೌಡ್ ಗೆ ಮಾತ್ರ ಬೇರೆ ರೂಮ್ ಇದೆ ಎಂದು ನುಡಿಯತ್ತಾರೆ. ಇ ಎನ್ ಟಿ ಎಂದರೆ ಕಿವಿ , ಮೂಗು ಮತ್ತು ಗಂಟಲು . ಸದರಿ ವೈದ್ಯರು ಆಯಾ ಭಾಗಕ್ಕೆ ಮಾತ್ರ ಚಿಕಿತ್ಸೆ ನೀಡುತ್ತಾರೆ. ದೇಹದ ಯಾವುದೇ ಭಾಗದಲ್ಲಿ ಗಾಯಗಳಾಗಿದ್ದಲ್ಲಿ ಆಯಾ ಭಾಗಗಳಿಗೆ ನಾನೇ ಚಿಕಿತ್ಸೆ ನೀಡುತ್ತೇನೆ. ಇ ಎನ್ ಟಿ ರವರು ನೀಡುವುದಿಲ್ಲ.

ಗಾಯಾಳು ಫಕ್ಕಿರಪ್ಪ ನಮ್ಮ ಆಸಪತ್ರೆಗೆ ಬಂದಿಲ್ಲ , ಚಿಕಿತ್ಸೆ ಪಡೆದಿಲ್ಲ , ದಾಖಲೆಗಳನ್ನು ಸೃಷ್ಟಿಸಿ ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು.

ಮರುವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 20

CW- 34

ಪ್ರ. ಬೋ. ದಿನಾಂಕಃ 25-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ರಾಜಾ |
| ತಂದೆ/ ಗಂಡನ ಹೆಸರು | : | ಓಬಯ್ಯ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಸಹಾಯಕ ಇಂಜಿನಿಯರ್ , ಪಿಡಬ್ಲೂಡಿ |
| ವಾಸ | : | ಶಿವಮೊಗ್ಗ . |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಎಪ್ರಿಲ್-2022 ರಿಂದ ಜೂನ್-2023 ರ ವರೆಗೆ ನಾನು ಹರಿಹರ ನಗರದಲ್ಲಿ ನಾನು ಪಿಡಬ್ಲೂಡಿ ಇಲ್ಯಲ್ಲಿ ಅಭಿಯಂತರನಾಗಿ ಕೆಲಸ ನಿರ್ವಹಿಸುತ್ತಿದ್ದೆ.

ದಿ.17-05-2023 ರಂದು ಹರಿಹರ ನಗರ ಪೊಲೀಸ್ ಠಾಣಾಧಿಕಾರಿಯವರು ಹರಿಹರ ನಗರ ಸಕರ್ಕಾರಿ ಆಸ್ಪತ್ರೆಯಲ್ಲಿ ಘಟನೆ ನಡೆದಿದೆ ಅಂತಾ ಹೇಳಿದ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಪತ್ರ ನೀಡಿದ್ದುರು. ಅದರಂತೆ ದಿ.17-06-2023 ರಂದು ಪಿಸಿ ಬೀರಲಿಂಗೇಶ್ವರ ರವರು ಸ್ಥಳವನ್ನು ತೋರಿಸಿದ್ದು , ಸ್ಥಳವನ್ನು ಅಳತೆ ಮಾಡಿ , ನಕ್ಷೆ ತಯಾರು ಮಾಡಿ ಕಳುಹಿಸಿರುತ್ತೇನೆ.

ಪೊಲೀಸರು ದಿ.17-05-2023 ರಂದು ಕಳುಹಿಸಿದ ಪತ್ರನೋಡುತ್ತಿದ್ದು, ಅದನ್ನು ನಿಪಿ.53 ಎಂದು ಗುರುತಿಸಲಾಯಿತು. ಆ ಪ್ರಕಾರ ಸ್ಥಳದಲ್ಲಿ ನಕ್ಷೆ ತಯಾರಿಸಿ ಕೊಟ್ಟಿದ್ದು, ಪತ್ರ ನೋಡುತ್ತಿದ್ದು , ಅದನ್ನು ನಿಪಿ.54 ಎಂದು , ನಕ್ಷೆಯನ್ನು ನಿಪಿ.55 ಎಂದು ಗುರುತಿಸಲಾಯಿತು. ನಕ್ಷೆಯಲ್ಲಿ ನನ್ನ ರುಜುವಿದ್ದು , ಅದನ್ನು ನಿಪಿ.55(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:–</u> ಆರೋಪಿತರಪರ ಶ್ರೀ ಪಿ ಬಿ ವಕೀಲರಿಂದ.

ನಿಪಿ.54 ಮತ್ತು 55 ರಲ್ಲಿ ಸ್ಥಳದಲ್ಲಿ ನಾನು ಎಷ್ಟು ಗಂಟೆಯಿಂದ ಎಷ್ಟು ಗಂಟೆ ವರೆಗೆ ಇದ್ದೆ ಎಂದು ಸಮಯ ನಮೂದು ಮಾಡಿಲ್ಲ. ನಾನು ನಕ್ಷೆ ತಯಾರುಮಾಡುವಾಗ ಆಸ್ಪತ್ರೆ ತೆರೆದಿತ್ತು , ಅಲ್ಲಿರುವ ವೈದ್ಯರಾಗಲಿ , ನರ್ಸ ಆಗಿಲಿ ಅವರ ಸಹಿ ಪಡೆದಿಲ್ಲ. ಆಸ್ಪತ್ರೆಗೆ ಭೇಟ್ಟಿ ಕೊಟ್ಟಾಗ ಆಸ್ಪತ್ರೆಯ ಸಿಎಂ ಓ ರವರ ಸಹಿ ಪಡೆದಿಲ್ಲ. ನಾನು ಆಸ್ಪತ್ರೆಗೆ ಭೇಟ್ಟಿ ಕೊಟ್ಟಿಲ್ಲ , ಪೊಲೀಸರು ಸ್ಥಳ ತೋರಿಸಿಲ್ಲ , ಸ್ಥಳದಲ್ಲಿ ನಾನು ನಿಪಿ.55 ನಕ್ಷೆ ತಯಾರು ಮಾಡದೇ ನಮ್ಮ ಕಛೇರಿಯಲ್ಲಿ ಕುಳಿತು ನಕ್ಷೆಯನ್ನು ತಯಾರು ಮಾಡಿ , ಪೊಲೀಸರಿಗೆ ಕೊಟ್ಟಿರುತ್ತೇನೆ ಎನ್ನುವುದು ಸುಳ್ಳು.

<u>ಮರುವಿಚಾರಣೆ</u>:– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 19

CW- 33

ಪ್ರ. ಬೋ. ದಿನಾಂಕಃ 25-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ನಾಗರಾಜ್ ನಾಯ್ಕ |
| ತಂದೆ/ಗಂಡನ ಹೆಸರು | : | ಚಂದ್ರಾನಾಯ್ಕ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ , ಬೆಸ್ಕಾಂ , |
| ವಾಸ | : | ಹರಿಹರ . |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಎರಡು ವರ್ಷದಿಂದ ಹರಿಹರ ಬೆಸ್ಕಾಂ ಕಛೇರಿಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿ.17-05-2023 ರಂದು ಹರಿಹರ ನಗರ ಪೊಲೀಸ್ ಠಾಣಾಧಿಕಾರಿಯವರು ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತು ಪ್ರಶಾಂತ್ ನಗರದಲ್ಲಿ ದಿ.14-05-2023 ರಂದು ರಾತ್ರಿ 10-15 ರಿಂದ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ನೀಡಬೇಕೆಂದು ಮಾಹಿತಿ ಕೋರಿದ್ದರು. ಆ ಪ್ರಕಾರ ನಾನು ಶಾಖಾಧಿಕಾರಿ , ಕೆ ಪಿ ಟಿ ಸಿ ಎಲ್ ಇವರಿಂದ ಮಾಹಿತಿ ಪಡೆದು, ಆ ಸಂದರ್ಭದಲ್ಲಿ ವಿದ್ಯುತ್ ಸರಬರಾಜು ಇದೆ ಎಂದು ದೃಢೀಕರಣ ಪತ್ರ ನೀಡಿರುತ್ತೇನೆ. ನಗರ ಪೊಲೀಸ್ ಠಾಣಾಧಿಕಾರಿಯವರು ನನಗೆ ಕಳುಹಿಸಿದ ಪತ್ರ ನೋಡುತ್ತಿದ್ದು , ಅದನ್ನು ನಿಪಿ.49 ಎಂದು ಗುರುತಿಸಲಾಯಿತು. ಆ ಪ್ರಕಾರ ನಾವು ದಿ.22-05-2023 ರಂದು ಪೊಲೀಸ್ ಠಾಣಾಧಿಕಾರಿಗಳಿಗೆ ಕೊಟ್ಟ ಪತ್ರನೋಡುತ್ತಿದ್ದು , ಅದನ್ನು ನಿಪಿ.50 ಎಂದು , ಅದರಲ್ಲಿನ ನನ್ನ ಸಹಿಯನ್ನು ನಿಪಿ.50(ಎ) ಎಂದು

ಗುರುತಿಸಲಾಯಿತು. ಸದರಿ ಮಾಹಿತಿ ಜೊತೆ ಶಾಖಾಧಿಕಾರಿ ಕೊಟ್ಟ ವರದಿ ಮತ್ತು ಲಾಗ್ ಬುಕ್ ಹಾಜರುಪಡಿಸಿದ್ದು, ಅವುಗಳನ್ನು ನಿಪಿ.51 ಮತ್ತು 52 ಎಂದು ಗುರುತಿಸಲಾಯಿತು.

ಪಾಟೀ ಸವಾಲು:- ಆರೋಪಿತರಪರ ಶ್ರೀ ಪಿ ಬಿ ವಕೀಲರಿಂದ.

ನಿಪಿ.51 ರಲ್ಲಿ ಸಮಯವನ್ನು ನಮೂದು ಮಾಡಲಾಗಿದೆ. ಪೊಲೀಸರ ಕೋರಿಕೆ ಮೇರೆಗೆ ನಾನು ಸುಳ್ಳು ವರದಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.